# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **727** |
| ಸದಸ್ಯರ ಹೆಸರು | : | ಶ್ರೀ ಐವನ್ ಡಿ ಸೋಜಾ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 16-12-2024 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಸಚಿವರು |

***

| | ಪ್ರಶ್ನೆ | ಉತ್ತರ |
|---|---|---|
| ಅ) | ಸೋಲಾರ್ ವಿದ್ಯುತ್ ಉತ್ಪಾದನೆ ಹೆಚ್ಚಿಸಲು ಇಲಾಖೆಯ ಮುಂದಿರುವ ಯೋಜನೆಗಳು ಯಾವುವು: (ವಿವರ ನೀಡುವುದು) | ನವೀಕರಿಸಬಹುದಾದ ಇಂಧನ ಮೂಲಗಳಿಂದ ವಿದ್ಯುತ್ ಉತ್ಪಾದನೆಗೆ ಪ್ರೋತ್ಸಾಹ ನೀಡಲು ಸರ್ಕಾರವು "ಕರ್ನಾಟಕ ನವೀಕರಿಸಬಹುದಾದ ಇಂಧನ ನೀತಿ 2022-27" ಯನ್ನು ದಿನಾಂಕ: 06.05.2022 ರಂದು ಜಾರಿಗೆ ತರಲಾಗಿದೆ.<br>ಕ್ರೆಡಲ್ ವತಿಯಿಂದ ವಿದ್ಯುತ್ ಸರಬರಾಜು ಕಂಪನಿಗಳ ವಿದ್ಯುತ್ ಖರೀದಿಗಾಗಿ ಟೆಂಡರ್ ಆಹ್ವಾನಿಸಿ ಯಶಸ್ವಿ ಬಿಡ್‌ದಾರರಿಗೆ ಸೌರ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲಾಗುತ್ತದೆ. ಇದಲ್ಲದೆ, ಮೂರನೇ ವ್ಯಕ್ತಿ ಮಾರಾಟ (Third Party Sale) , ಸ್ವಯಂ ಬಳಕೆ (Captive use), ಸಮೂಹ ಸ್ವಯಂ ಬಳಕೆ (Group Captive use) ವರ್ಗ ಮತ್ತು ಖಾಸಗಿ ಸೌರ ಪಾರ್ಕ್‌ದಡಿ ಸೌರ ವಿದ್ಯುತ್ ಯೋಜನೆಗಳನ್ನು ಖಾಸಗಿ/ಸರ್ಕಾರಿ ಸಂಸ್ಥೆಗಳು ಸ್ಥಾಪಿಸಲು ಅವಕಾಶ ಕಲ್ಪಿಸಲಾಗಿದೆ.<br>ಕ್ರೆಡಲ್ ವತಿಯಿಂದ ಈ ಕೆಳಕಂಡ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ.<br>➢ ಪ್ರಾಯೋಗಿಕವಾಗಿ ಪಾವಗಡ ಸೋಲಾರ್ ಪಾರ್ಕ್ ನಲ್ಲಿ 2MW/4.5MWhr ಸಾಮರ್ಥ್ಯದ ಬ್ಯಾಟರಿ ಶೇಖರಣೆ ವ್ಯವಸ್ಥೆಯನ್ನು ಹೊಂದಿದ ಘಟಕವನ್ನು ಸ್ಥಾಪಿಸಲಾಗುತ್ತಿದೆ. ಸದರಿ ಘಟಕದ ಕಾರ್ಯವು ಪ್ರಗತಿಯಲ್ಲಿದೆ.<br>➢ ಪಾವಗಡ ತಾಲ್ಲೂಕಿನ Ryapte ಗ್ರಾಮದಲ್ಲಿ 2000 MW ಸಾಮರ್ಥ್ಯದ RE ಪಾರ್ಕ್ ಸ್ಥಾಪನೆ. ಸದರಿ ಪಾರ್ಕ್ ಅನ್ನು ಮಾರ್ಚ್ 2027 ಕ್ಕೆ ಕಾರ್ಯಗತಗೊಳಿಸಲು ಉದ್ದೇಶಿಸಿದೆ.<br>➢ ಪಾವಗಡ ಸೋಲಾರ್ ಪಾರ್ಕ್ ನಲ್ಲಿ 300 MW ಸೌರ ವಿದ್ಯುತ್ ಯೋಜನೆಯ ಸ್ಥಾಪನೆ. ಸದರಿ ಯೋಜನೆಯು ಮಾರ್ಚ್ 2026ಕ್ಕೆ ಕಾರ್ಯಗತಗೊಳಿಸಲು ಉದ್ದೇಶಿಸಿದೆ.<br>➢ ಕಲಬುರ್ಗಿಯಲ್ಲಿ 100MW ಸೋಲಾರ್ /100MWhr (BESS) ಸ್ಥಾಪನೆ. ಸದರಿ ಯೋಜನೆಯು ಆಗಸ್ಟ್ 2026ಕ್ಕೆ ಅನುಷ್ಠಾನಗೊಸಲು ಉದ್ದೇಶಿಸಿದೆ.<br>➢ ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕಿನಲ್ಲಿ 500 MW ಸೋಲಾರ್ ಪಾರ್ಕ್ ಸ್ಥಾಪನೆಗೆ ಯೋಜನೆಯನ್ನು ರೂಪಿಸಲಾಗಿದೆ. |

| | | |
|---|---|---|
| ಆ) | "ರೂಫ್ ಟಾಪ್" ಸೋಲಾರ್ ವಿದ್ಯುತ್‌ನ್ನು ಉತ್ಪಾದಿಸಲು ಇಲಾಖೆ ನೀಡುತ್ತಿರುವ ಪ್ರೋತ್ಸಾಹವೇನು; ಪ್ರತಿ ಮನೆ ಮತ್ತು ಸರ್ಕಾರಿ ಕಛೇರಿಗಳಲ್ಲಿ ಸೋಲಾರ್ ವಿದ್ಯುತ್ ಉತ್ಪಾದಿಸಲು ಇಲಾಖೆ ಕ್ರಮ ತೆಗೆದುಕೊಳ್ಳುವುದೇ (ವಿವರ ನೀಡುವುದು) | ಪ್ರಧಾನ ಮಂತ್ರಿ ಸೂರ್ಯ ಘರ್ ಯೋಜನೆಯಡಿಯಲ್ಲಿ"ರೂಫ್ ಟಾಪ್" ಸೋಲಾರ್ ವಿದ್ಯುತ್‌ನ್ನು ಉತ್ಪಾದಿಸಲು ಈ ಕೆಳಕಂಡಂತೆ ಉತ್ತೇಜನ ನೀಡಲಾಗುತ್ತಿದೆ.<br>➢ ಗ್ರಾಹಕರಲ್ಲಿ ಪಿ ಎಂ ಸೂರ್ಯಘರ್ ಯೋಜನೆಯ ಕುರಿತು ಜಾಗೃತಿ ಮೂಡಿಸಲು ದಿನಪತ್ರಿಕೆಯಲ್ಲಿ ಜಾಹಿರಾತು ಪ್ರಕಟಿಸಲಾಗಿದೆ.<br>➢ ರೂಪ್ ಟಾಪ್" ವಿದ್ಯುತ್ ಘಟಕಗಳನ್ನು ಅಳವಡಿಸುವ ಯೋಜನೆಗಳ ಬಗ್ಗೆ ಸಾಮಾಜಿಕ ಮಾಧ್ಯಮ (Social Medias handles) ಗಳ ಮುಖಾಂತರ ಹಾಗೂ ಯೋಜನೆಗಳ ವಿವರಗಳನ್ನೊಳಗೊಂಡ ಭಿತ್ತಿ ಪತ್ರಗಳನ್ನು ವಿತರಿಸುವ ಮೂಲಕ ಪ್ರಚಾರ ಮಾಡಲಾಗುತ್ತಿದೆ. ಕರಪತ್ರಗಳನ್ನು ಮನೆ ಮನೆಗಳಿಗೆ ಹಂಚುವ ಮೂಲಕ ಜಾಗೃತಿ ಮೂಡಿಸಲಾಗುತ್ತಿದೆ.<br>➢ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಯ ವೆಬ್ ಸೈಟ್ ನಲ್ಲಿ ಹಾಗೂ ಎಲ್ಲ ಎಸ್ಕಾಂ ಕಚೇರಿಗಳ ಸೂಚನಾ ಫಲಕದಲ್ಲಿ ಯೋಜನೆಯ ಸಂಪೂರ್ಣ ಮಾಹಿತಿಯನ್ನು ಪ್ರದರ್ಶಿಸಲಾಗಿದೆ.<br>➢ ಎಸ್ಕಾಂ ಶಾಖಾವಾರು ಜಾಗೃತಿ ಕಾರ್ಯಕ್ರಮಗಳನ್ನು ನಡೆಸಲಾಗಿದೆ ಹಾಗೂ ಪಂಚಾಯಿತಿವಾರು ಜಾಗೃತಿ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ.<br><br>ಮುಂದುವರೆದು, ಸರ್ಕಾರಿ ಕಟ್ಟಡದ ಮೇಲೆ ಸೋಲಾರ್ ರೂಫ್ ಟಾಪ್ ಯೋಜನೆಗಳನ್ನು ಕಾರ್ಯಗತಗೊಳಿಸಲು ಕರ್ನಾಟಕ ಸರ್ಕಾರದಿಂದ ಕ್ರೆಡಲ್ ನಿಯಮಿತ, ಲೋಕೋಪಯೋಗಿ ಇಲಾಖೆ ಮತ್ತು ಎಸ್ಕಾಂಗಳ ಸಹಯೋಗದಿಂದ ಸರ್ಕಾರಿ ಕಛೇರಿಗಳ ಮೇಲೆ ಸೋಲಾರ್ ರೂಫ್ ಟಾಪ್ ಅಳವಡಿಸಲು ರೂಪುರೇಷಗಳನ್ನು ಸಿದ್ಧಪಡಿಸಲಾಗುತ್ತಿದೆ. |
| ಇ) | "ರೂಫ್ ಟಾಪ್" ಸೋಲಾರ್ ವಿದ್ಯುತ್‌ನ್ನು ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ. ಉತ್ಪಾದಿಸಲಾಗುತ್ತದೆ; ಇದರಿಂದ ಉತ್ಪಾದಿಸುವ ವಿದ್ಯುತ್ ಎಷ್ಟು; ಜಿಲ್ಲಾವಾರು ವಿವರ ನೀಡುವುದು: | ಸೋಲಾರ್ ಮೇಲ್ಛಾವಣಿ (ಸೋಲಾರ್ ರೂಫ್ ಟಾಪ್) ಘಟಕಗಳಿಂದ 2024-25 (ಅಕ್ಟೋಬರ್-2024 ರವರೆಗೆ) ಉತ್ಪಾದಿಸಲಾದ ವಿದ್ಯುತ್ ಪ್ರಮಾಣದ ಜಿಲ್ಲಾವಾರು ವಿವರಗಳನ್ನು **ಅನುಬಂಧ**ದಲ್ಲಿ ಒದಗಿಸಲಾಗಿದೆ. |

| | | |
|---|---|---|
| ಈ) | "ರೂಫ್ ಟಾಪ್" ವಿದ್ಯುತ್ ಉತ್ಪಾದನೆಗೆ ಇಲಾಖೆ ಪ್ರಚಾರ ನೀಡದಿರುವುದರಿಂದ ಕಛೇರಿ ಮನೆಗಳ ಮೇಲೆ ಉತ್ಪಾದನೆ ಮಾಡದೇ ಇರಲು ಕಾರಣವಾಗಿದ್ದು, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು) | ಸೋಲಾರ್ ರೂಫ್ ಟಾಪ್ ಯೋಜನೆಗಳ ಬಗ್ಗೆ ಎಸ್ಕಾಂ ವತಿಯಿಂದ ಕೈಗೊಳ್ಳಲಾದ ಕ್ರಮಗಳು ಈ ಕೆಳಕಂಡಂತಿದೆ:<br>➢ ಗ್ರಾಹಕರಲ್ಲಿ ಪಿ ಎಂ ಸೂರ್ಯಘರ್ ಯೋಜನೆಯ ಕುರಿತು ಜಾಗೃತಿ ಮೂಡಿಸಲು ದಿನಪತ್ರಿಕೆಯಲ್ಲಿ ಜಾಹಿರಾತು ಪ್ರಕಟಿಸಲಾಗಿದೆ.<br>➢ ರೂಫ್ ಟಾಪ್" ವಿದ್ಯುತ್ ಘಟಕಗಳನ್ನು ಅಳವಡಿಸುವ ಯೋಜನೆಗಳ ಬಗ್ಗೆ ಸಾಮಾಜಿಕ ಮಾಧ್ಯಮ (Social Medias handles) ಗಳ ಮುಖಾಂತರ ಹಾಗೂ ಯೋಜನೆಗಳ ವಿವರಗಳನ್ನೊಳಗೊಂಡ ಭಿತ್ತಿ ಪತ್ರಗಳನ್ನು ವಿತರಿಸುವ ಮೂಲಕ ಪ್ರಚಾರ ಮಾಡಲಾಗುತ್ತಿದೆ. ಕರಪತ್ರಗಳನ್ನು ಮನೆ ಮನೆಗಳಿಗೆ ಹಂಚುವ ಮೂಲಕ ಜಾಗೃತಿ ಮೂಡಿಸಲಾಗುತ್ತಿದೆ.<br>➢ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಯ ವೆಬ್ ಸೈಟ್ ನಲ್ಲಿ ಹಾಗೂ ಎಲ್ಲ ಎಸ್ಕಾಂ ಕಚೇರಿಗಳ ಸೂಚನಾ ಫಲಕದಲ್ಲಿ ಯೋಜನೆಯ ಸಂಪೂರ್ಣ ಮಾಹಿತಿಯನ್ನು ಪ್ರದರ್ಶಿಸಲಾಗಿದೆ.<br>➢ ಎಸ್ಕಾಂ ಶಾಖಾವಾರು ಜಾಗೃತಿ ಕಾರ್ಯಕ್ರಮಗಳನ್ನು ನಡೆಸಲಾಗಿದೆ ಹಾಗೂ ಪಂಚಾಯಿತಿವಾರು ಜಾಗೃತಿ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ. |

ಸಂಖ್ಯೆ: ಎನರ್ಜಿ 359 ಇಬಿಎಸ್ 2024

(ಕೆ.ಜೆ.ಜಾರ್ಜ್)
ಇಂಧನ ಸಚಿವರು

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಐವನ್ ಡಿ'ಸೋಜಾ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 727ಕ್ಕೆ ಅನುಬಂಧ

ವಿದ್ಯುತ್ ಸರಬರಾಜು ಕಂಪನಿಗಳ ವತಿಯಿಂದ ಸೋಲಾರ್ ಮೇಲ್ಛಾವಣಿ ಘಟಕಗಳಿಂದ ಉತ್ಪಾದನೆಗೊಂಡ ವಿದ್ಯುತ್ ಪ್ರಮಾಣದ ಜಿಲ್ಲಾವಾರು **2024-25 (ಏಪ್ರಿಲ್-24 ರಿಂದ ಅಕ್ಟೋಬರ್-24ರ ಅಂತ್ಯಕ್ಕೆ)** ವಿವರಗಳು ಈ ಕೆಳಕಂಡಂತಿದೆ:

| ಸಂಖ್ಯೆ | ವಿಸಕಂಗಳು | ಒಟ್ಟು ಉತ್ಪಾದನೆ (ಮಿ.ಯೂನಿಟ್ ಗಳಲ್ಲಿ) |
|---|---|---|
| 1 | ಬೆಸ್ಕಾಂ | 281.57 |
| 2 | ಸೆಸ್ಕ್ | 17.56 |
| 3 | ಮೆಸ್ಕಾಂ | 39.70 |
| 4 | ಹೆಸ್ಕಾಂ | 20.34 |
| 5 | ಜೆಸ್ಕಾಂ | 29.47 |
| **ಒಟ್ಟು** | | **388.64** |

### ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ:

| ಸಂಖ್ಯೆ | ಜಿಲ್ಲಾವಾರು | ಒಟ್ಟು ಉತ್ಪಾದನೆ (ಮಿ.ಯೂನಿಟ್ ಗಳಲ್ಲಿ) |
|---|---|---|
| 1 | ಬೆಂಗಳೂರು | 163.841 |
| 2 | ರಾಮನಗರ | 12.479 |
| 3 | ಬೆಂಗಳೂರು ಗ್ರಾಮಾಂತರ | 33.168 |
| 4 | ಕೋಲಾರ | 17.618 |
| 5 | ಚಿಕ್ಕಬಳ್ಳಾಪುರ | 12.993 |
| 6 | ತುಮಕೂರು | 16.832 |
| 7 | ಚಿತ್ರದುರ್ಗ | 17.754 |
| 8 | ದಾವಣಗೆರೆ | 6.792 |
| 9 | ವಿಜಯಾನಗರ | 0.093 |
| | **ಒಟ್ಟು** | **281.570** |

### ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ:

| ಜಿಲ್ಲೆ | ಉತ್ಪಾದಿಸಿರುವ ವಿದ್ಯುತ್ (ಮಿ. ಯೂನಿಟ್ ಗಳಲ್ಲಿ) |
|---|---|
| ಮೈಸೂರು | 13.33 |
| ಮಂಡ್ಯ | 2.59 |
| ಚಾ.ನಗರ | 0.12 |
| ಕೊಡಗು | 1.01 |
| ಹಾಸನ | 0.51 |
| **ಒಟ್ಟು** | **17.56** |

## ಮಂಗಳೂರು ವಿದ್ಯುತ್ ಸರಬರಾಜು ಕಂಪನಿ:

| ಜಿಲ್ಲಾವಾರು | SRTPV ಸ್ಥಾವರಗಳಲ್ಲಿನ ಉತ್ಪಾದನೆ (ಮಿ. ಯೂನಿಟ್ ಗಳಲ್ಲಿ) |
|---|---|
| ದಕ್ಷಿಣ ಕನ್ನಡ | 29.61 |
| ಉಡುಪಿ | 6.19 |
| ಶಿವಮೊಗ್ಗ | 3.02 |
| ಚಿಕ್ಕಮಗಳೂರು | 0.88 |
| ಒಟ್ಟು | **39.70** |

## ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ:

| ಕ್ರ. ಸಂ | ಜಿಲ್ಲೆಯ ಹೆಸರು | ಉತ್ಪಾದಿಸುವ ವಿದ್ಯುತ್ (ಮಿ.ಯೂ) |
|---|---|---|
| 1 | ಬಾಗಲಕೋಟ | 3.08 |
| 2 | ಬೆಳಗಾವಿ | 5.09 |
| 3 | ಧಾರವಾಡ | 3.75 |
| 4 | ಗದಗ | 2.85 |
| 5 | ಹಾವೇರಿ | 0.90 |
| 6 | ಉತ್ತರಕನ್ನಡ | 1.31 |
| 7 | ವಿಜಯಪುರ | 3.36 |
| | ಒಟ್ಟು | **20.34** |

## ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿ:

| ಕ್ರ. ಸಂ | ಜಿಲ್ಲೆಯ ಹೆಸರು | ಉತ್ಪಾದಿಸುವ ವಿದ್ಯುತ್ (ಮಿ.ಯೂ) |
|---|---|---|
| 1 | ಬೀದರ್ | 1.871 |
| 2 | ಕಲಬುರಗಿ | 7.186 |
| 3 | ಯಾದಗಿರಿ | 1.105 |
| 4 | ರಾಯಚೂರು | 6.306 |
| 5 | ಕೊಪ್ಪಳ | 4.614 |
| 6 | ಬಳ್ಳಾರಿ | 5.23 |
| 7 | ವಿಜಯನಗರ | 3.147 |
| | ಒಟ್ಟು | **29.465** |